GOVERNMENT OF KARNATAKA
DEPARTMENT OF EDUCATION
Office of Deputy Director, Department of Education Koppal District

Accreditation Renewal Certificate

No : 66049

Date : 30-Oct-2024

Subject : Regarding Granting School Recognition as per the Rules framed under the Child Education act 2009 and Karnataka Education Act 1983.

Above Subject NIngoji Education And Rural Development Trust Koppal as Management Dise Code is 29070916103 S A Ningoji Central Public School Yelburga. Ward No 9 Yelburga officials have verified Document in the applications submission to the for The renewal of Recantation for English Medium 1 to 10 Class and have Renewed Recantation as follows .

| Sl.No | Details | Online Application No |
|---|---|---|
| 01 | Management Name and Address | NINGOJI EDUCATION AND RURAL DEVELOPMENT TRUST® KOPPAL |
| 02 | School Name | S A NINGOJI CENTRAL PUBLIC SCHOOL YELBURGA. |
| 03 | Dice Code | 29070916103 |
| 04 | Class | 1 TO10 |
| 05 | Medium | ENGLISH |
| 06 | Section | 10 |
| 07 | School Type | PVT. UNAIDED/RENEWAL RECOGNITION |
| 08 | Year of the Renewal Accreditation | FROM 2024 2025 TO 2033 2034 |

Conditions:

1. The School has been registered child right education act 2009, and the Karnataka education act 1983 and the rules made there under and the recognition has been renewed up to the registered class no additional classes and additional section are permitted to be conducted outside these classes.
2. The School is a public school under the Karnataka education act 1983 and child rights education act 2009.
3. Child rights education act 2009, under rules made there under 25% seats wil be reserved for reason weaker sections. The government will have the authority to enroll the seats reserved by the government for schools falling under the purview of RTE under RTE. (The Govt has made rules to facilitated enrollment in schools near the Residence of the parents of the children, and the Accordingly if there are govt or Government aided Educational in institution the children enrolled in the school in case there are no search school, Private schools will be allowed to enroll the children enroleed by the Government and continue there education upto the primary level. These Children aloowed to continue there studies without any Discrimination.
4. The Karnataka government is actively working on regulating private schools, particularly concerning fees and admissions. Recent legal challenges have questioned the state's authority to regulate fees in unaided private schools, with the High Court ruling against the government's power to do so. However, the government is seeking to challenge these rulings and implement measures to protect the interests of children and parents.
5. recognised educational institution" means an educational institution recognised under this Act and includes one deemed to be recognised thereunder
6. School /Management fixed by RTE fees show on the Notice Board and SATS. Don't Collect any Additional Fees.
7. Admission you will take School/Management Government Decided by Government of Karnataka.
8. School/Management don't oppose the below Condition.

Attested True Copy
C.S. Banappagoudar
B.A.LL.B(Spl)
Notary Public
Govt. of India on Dated

9. RTE rules and Regulations, Karnataka Education act, all rules maintain the Properly.
10. Schools must appoint qualified teachers and staff as per government regulations.
    1) he Right to Education (RTE) Act is also applicable, ensuring free and compulsory education for children
    2) It shall be provided by teachers working in the school, or by teachers specially appointed for the purpose.
    3) For children from small hamlets, as identified by the DDPI or Local Authority, where no school exists within the area or limits of neighbourhood specified under sub-rule (1) above, suitable arrangements such as free transportation, residential facilities and/ or other facilities shall be arranged. The cost for these alternative arrangements shall be fixed by C.P.I or the Local Authority as per local conditions. Expenditures on alternative arrangements shall be met by State Government / Local Authority.
    4) The Local Authority shall identify the neighbourhood school where children can be admitted and make such information public for each habitation within its jurisdiction.
    5) Every school shall furnish a Report to the DDPI through the Block Education during July and January of the year, in Form III -giving status report of the school.
    6) The School Development and Monitoring Committee shall, in addition to the functions specified in clauses (a) to (d) of section 21 (2), perform the following functions, namely.
    7) Bring to the notice of the local authority any deviation from the rights of the child. in particular mental and physical harassment of children, denial of admission, and timely provision of free entitlements.
    8) The School Development and Monitoring Committee shall prepare a School Development Plan three months before the end of the financial year. This plan will include the needs of disabled children as well.
11. Additional financial requirement over the three years period, year-wise, in respect of (b) and (c) above, including additional requirement needed for bridge courses, special training of teachers, all entitlements of children, and any other financial requirement for fulfilling the responsibilities of the school under the Act.
12. Every recognised educational institution shall appoint only qualified teachers and other staff as specified in the recruitment rules notified by the State Government or the competent authority authorised in this behalf.
13. In case of Government and recognised private aided institutions tuition fees shall be collected only from the failed students at the rates specified by the State Government or the Competent Authority authorised in this behalf.
14. The first meeting of every monthly constituted parent-Teacher Committee shall be held on the day of its constitution. An order constituting the committee shall be issued by the Head of the Institution.
15. The State Government or the Competent authority shall by notification specify the method of admission to various courses, classes and categories of educational institutions.
16. The decision of the Regulating Authority'shall be communicated to the institution in writing by the Chairman and he shall pass an order to this effect which shall be binding.
17. the Right to Education (RTE) Act mandates that private unaided schools reserve 25% of their seats for children from economically weaker sections and disadvantaged groups, and these seats are to be filled through a lottery system. Schools must also adhere to age criteria, display admission details, and avoid conducting interviews or entrance tests.
18. the Right to Education (RTE) Act mandates that private unaided schools reserve 25% of their seats for children from economically weaker sections and disadvantaged groups, and these seats are to be filled through a lottery system. Schools must also adhere to age criteria, display admission details, and avoid conducting interviews or entrance tests.
19. Every year update SATS School Data.
20. Above condition after completion RTE act 2009 and Under Karnataka Education act1983 act as per rules regulations cancelation your school recognition .
21. After the school accredatation process is complted the entired document / information in the application submitted online by the governing body will made publically available on the departmental website .
22. In case Villation of the above condition the school recognattion will cancelled as per the rules framed under the RTE act 2009 and Karnataka education act 1983.
23. It is mandatory to update and upload the safety certificates and lease agreement documents obtained from the competent authority in SATS within one month of there expiry.

C.S. Banappagoudar
Notary Public

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಉಪನಿರ್ದೇಶಕರ ಕಛೇರಿ , ಸಾರ್ವಜನಿಕ ಶಿಕ್ಷಣ ಇಲಾಖೆ,KOPPAL ಜಿಲ್ಲೆ

# ಮಾನ್ಯತೆ ನವೀಕರಣ ಪ್ರಮಾಣ ಪತ್ರ

ದಿನಾಂಕ : 30-Oct-2024

ಸಂಖ್ಯೆ : 66049

ವಿಷಯ : ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983 ಯೊಳಗೆ ರಚಿತವಾಗಿರುವ ನಿಯಮಗಳನ್ವಯ ಶಾಲಾ ಮಾನ್ಯತೆಯನ್ನು ನೀಡುವ ಬಗ್ಗೆ.

&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ NINGOJI EDUCATION AND RURAL DEVELOPMENT TRUST KOPPAL ಆಡಳಿತ ಮಂಡಳಿಯು 29070916103 ಡೈಸ್ ಕೋಡ್ ಸಂಖ್ಯೆ S A NINGOJI CENTRAL PUBLIC SCHOOL AND HIGH SCHOOL_WARD 9 YELBURGA ಶಾಲೆಗೆ [ವಿಳಾಸ], 1_10 ತರಗತಿವರೆಗೆ English ಮಾಧ್ಯಮಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಲು ಆನ್ಲೈನ್ನಲ್ಲಿ ಸಲ್ಲಿಸಿದ್ದ ಅರ್ಜಿಯಲ್ಲಿನ ದಾಖಲೆಗಳನ್ನು ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ, ಈ ಕೆಳಕಂಡಂತೆ ಮಾನ್ಯತೆಯನ್ನು ನವೀಕರಿಸಿದೆ.

| ಕ್ರ.ಸಂ. | ವಿವರ | ಆನ್ಲೈನ್ ಅರ್ಜಿ ಸಂಖ್ಯೆ : 66049 |
|---|---|---|
| 1 | ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ | NINGOJI EDUCATION AND RURAL DEVELOPMENT TRUST KOPPAL |
| 2 | ಶಾಲೆಯ ಹೆಸರು ಮತ್ತು ವಿಳಾಸ | S A NINGOJI CENTRAL PUBLIC SCHOOL AND HIGH SCHOOL_WARD 9 YELBURGA |
| 3 | ಡೈಸ್ ಕೋಡ್ ಸಂಖ್ಯೆ: | 29070916103 |
| 4 | ತರಗತಿ | 1 to 10 |
| 5 | ಮಾಧ್ಯಮ | English |
| 6 | ವಿಭಾಗ | 10 |
| 7 | ಶಾಲಾ ವಿಧ | Pvt. Unaided /Renewal Recognition |
| 8 | ಮಾನ್ಯತೆ ನವೀಕರಿಸಿರುವ ವರ್ಷ | 2024 2025 ಸಾಲಿನಿಂದ 2033 2034 ರವರೆಗೆ |

ಷರತ್ತುಗಳು:

1. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009, ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅಡಿಯಲ್ಲಿ ಹಾಗೂ ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಅನುಸಾರ ಶಾಲೆಯನ್ನು ನೋಂದಾಯಿಸಿ, ನೋಂದಾಯಿಸಿದ ತರಗತಿವರೆಗೆ ಮಾನ್ಯತೆಯನ್ನು ನವೀಕರಿಸಲಾಗಿದೆ. ಈ ತರಗತಿಗಳ ಹೊರತಾಗಿ ಹೆಚ್ಚುವರಿ ತರಗತಿಗಳನ್ನು ಮತ್ತು ಹೆಚ್ಚುವರಿ ವಿಭಾಗಗಳನ್ನು ನಡೆಸಲು ಅನುಮತಿ ಇರುವುದಿಲ್ಲ.

2. ಶಾಲೆಯು ಕರ್ನಾಟಕ ಶಿಕ್ಷಣ ಕಾಯ್ದೆ 1983 ಮತ್ತು ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುವುದು.

ಉಪನಿರ್ದೇಶಕರು (ಆಡಳಿತ
ಶಾಲಾ ಶಿಕ್ಷಣ ಇಲಾಖೆ
ಕೊಪ್ಪಳ

3. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಶೇಕಡಾ 25%ರಷ್ಟು ಸೀಟುಗಳನ್ನು ದುರ್ಬಲ ವರ್ಗದ ಮಕ್ಕಳಿಗೆ ಮೀಸಲಿಡುವುದು. ಆರ್.ಟಿ.ಇ ವ್ಯಾಪ್ತಿಗೆ ಒಳಪಡುವ ಶಾಲೆಗಳಿಗೆ ಸರ್ಕಾರವು ಮೀಸಲಿಟ್ಟ ಸೀಟುಗಳನ್ನು ಆರ್.ಟಿ.ಇ ಅಡಿಯಲ್ಲಿ ದಾಖಲಿಸಲು ಅಧಿಕಾರ ಹೊಂದಿರುತ್ತದೆ. [ಸರ್ಕಾರವು ಮಕ್ಕಳ ಪೋಷಕರು ವಾಸಿಸುವ ಅಕ್ಕ ಪಕ್ಕದ ಶಾಲೆಗಳಲ್ಲಿ ದಾಖಲಿಸಲು ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸಿದ್ದು, ಅದರಂತೆ ಸರ್ಕಾರಿ, ಸರ್ಕಾರದಿಂದ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳು ಇದ್ದಲ್ಲಿ ಆ ಶಾಲೆಗೆ ಮಕ್ಕಳನ್ನು ದಾಖಲಿಸಲಾಗುವುದು] ಇಲ್ಲದಿದ್ದ ಪಕ್ಷದಲ್ಲಿ ಖಾಸಗಿ ಶಾಲೆಗಳು ಸರ್ಕಾರದಿಂದ ದಾಖಲಿಸುವ ಮಕ್ಕಳನ್ನು ದಾಖಲಿಸಿಕೊಂಡು ಪ್ರಾಥಮಿಕ ಹಂತದವರೆಗೆ ವಿದ್ಯಾಭ್ಯಾಸ ಮುಂದುವರೆಸಲು ಅವಕಾಶ ನೀಡುವುದು. ಈ ಮಕ್ಕಳನ್ನು ಯಾವುದೇ ತಾರತಮ್ಯವಿಲ್ಲದೆ ವ್ಯಾಸಂಗ ಮುಂದುವರೆಸಲು ಅವಕಾಶ ಕಲ್ಪಿಸುವುದು.

4. ಕಂಡಿಕೆ:3ರಲ್ಲಿ ವಿವರಿಸಿರುವಂತೆ ಆರ್.ಟಿ.ಇ ನಿಯಮದಡಿ ದಾಖಲಾದ ಮಕ್ಕಳ ಶುಲ್ಕಗಳನ್ನು ನಿಯಮಾನುಸಾರ ಸರ್ಕಾರವು ಬಿಡುಗಡೆ ಮಾಡುತ್ತದೆ. ಆದ್ದರಿಂದ ಈ ಮಕ್ಕಳಿಂದ ಯಾವುದೇ ಶುಲ್ಕವನ್ನು ವಸೂಲು ಮಾಡುವುದನ್ನು ನಿರ್ಭಂದಿಸಿದೆ.

5. ಶಾಲೆ ಮತ್ತು ಶಾಲೆಯ ಆಡಳಿತ ಮಂಡಳಿಯು ಯಾವುದೇ ತರವಾದ ಕ್ಯಾಪಿಟೇಷನ್ ಶುಲ್ಕವನ್ನು ಮತ್ತು ಸ್ವಇಚ್ಛೆಯಿಂದ ನೀಡುವ ಡೊನೇಷನ್ಗಳನ್ನು ಪೋಷಕರಿಂದ ದಾಖಲಾತಿ ಸಮಯದಲ್ಲಾಗಲೀ ಅಥವಾ ನಂತರದಲ್ಲಾಗಲೀ ಯಾವುದೇ ರೀತಿಯಾಗಿ ವಸೂಲು ಮಾಡುವುದನ್ನು ನಿರ್ಭಂದಿಸಿದೆ.

6. ಶಾಲೆಯು / ಆಡಳಿತ ಮಂಡಳಿಯು ತಾವು ನಿಗದಿಪಡಿಸಿರುವ ಶುಲ್ಕದ ಮಾಹಿತಿಯನ್ನು ಆರ್.ಟಿ.ಇ ಕಾಯ್ದೆ ಸೆಕ್ಷನ್ 2B ರನ್ವಯ ಶಾಲಾ ಸೂಚನಾ ಫಲಕ/ಜಾಲತಾಣ ಹಾಗೂ SATS ನಲ್ಲಿ ಪ್ರಕಟಿಸುವುದು. ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ.

7. ಶಾಲೆಯು / ಆಡಳಿತ ಮಂಡಳಿಯು ವಿದ್ಯಾರ್ಥಿಗಳನ್ನು ಸರ್ಕಾರವು ನಿಗದಿಪಡಿಸಿದ ಅವಧಿಯಲ್ಲಿಯೇ ದಾಖಲಾತಿ ಮಾಡಿಕೊಳ್ಳುವುದು.

8. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡ ಅಂಶಗಳ ವಿರುದ್ಧ ದಾಖಲಾತಿಯನ್ನು ನಿರಾಕರಿಸುವಂತಿಲ್ಲ.

(i) ವಯಸ್ಸಿನ ಪುರಾವೆ ಕೊರತೆಯಿಂದಾಗಿ.

(ii) ಜಾತಿ, ಧರ್ಮ, ಹುಟ್ಟಿದ ಸ್ಥಳ, ಭಾಷೆಯ ಆಧಾರದ ಮೇಲೆ.

(iii) ಪ್ರವೇಶದ ವಿಸ್ತೃತ ಅವಧಿಯ ನಂತರ ಪ್ರವೇಶವನ್ನು ಕೋರಿದರೆ.

9. ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು, ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು. [ಸಂಬಂಧಿಸಿದ ಪ್ರಾಧಿಕಾರಗಳಿಂದ ಅಗ್ನಿ ಸುರಕ್ಷತೆ ಮತ್ತು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ಹಾಗೂ K.S.C.P.C.R ಮತ್ತು N.C.P.C.R ಪ್ರಕಾರ ಮಕ್ಕಳ ಕಲಿಕೆಯ ಸುರಕ್ಷತೆ].

10. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡಂತೆ

(i) ಪ್ರವೇಶ ಪಡೆದ ಯಾವುದೇ ಮಗುವನ್ನು ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಯಾವುದೇ ತರಗತಿಯಲ್ಲಿ ಹಿಡಿದಿಟ್ಟುಕೊಳ್ಳಬಾರದು ಅಥವಾ ಶಾಲೆಯಿಂದ ಹೊರಹಾಕಬಾರದು.

(ii) ಯಾವುದೇ ಮಗುವನ್ನು ದೈಹಿಕ ಅಥವಾ ಮಾನಸಿಕವಾಗಿ ಕಿರುಕುಳಕ್ಕೆ ಒಳಪಡಿಸಬಾರದು.

(iii) ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಯಾವುದೇ ಮಗು ಯಾವುದೇ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಗತ್ಯವಿಲ್ಲ.

(iv) ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಪ್ರತಿ ಮಗುವಿಗೆ ಆರ್.ಟಿ.ಇ ನಿಯಮ 21 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ನಿಗದಿಪಡಿಸಿದಂತೆ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

(v) ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಬಂಧನೆಗಳ ಪ್ರಕಾರ ಶಾಲೆಯು ವಿಶೇಷ ಅಗತ್ಯತೆಗಳು / ವಿಶೇಷ ಮಕ್ಕಳನ್ನು ಹೊಂದಿರುವ ಮಕ್ಕಳನ್ನು ಸಹ ಸೇರಿಸಿಕೊಳ್ಳಬೇಕು.

(vi) ನೇಮಕಗೊಂಡ ಶಿಕ್ಷಕರು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಹಾಗೂ ಸರ್ಕಾರಿ ಆದೇಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ನಿಗದಿಪಡಿಸಿದಂತೆ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು.

(vii) ಶಿಕ್ಷಕರಿಗೆ ಪಾವತಿಸಬೇಕಾದ ವೇತನ ಮತ್ತು ಭತ್ಯೆಗಳು ಹಾಗೂ ಸೇವಾ ನಿಯಮಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ಸೂಚಿಸಿದಂತೆ ಇರುತ್ತದೆ. ಮತ್ತು ಸರ್ಕಾರಿ ಅಧಿಸೂಚನೆ [ಭವಿಷ್ಯ ನಿಧಿ (Pಈ)] ಮತ್ತು ಪಾವತಿಸಬೇಕಾದ ಬ್ಯಾಂಕ್ ಮತ್ತು ಇತರೆ ವೇತನಗಳ ಮೂಲಕ ಶಿಕ್ಷಕರಿಗೆ ವೇತನವನ್ನು ಪಾವತಿಸಲಾಗುತ್ತದೆ. ಮತ್ತು ಉದ್ಯೋಗಿ ರಾಜ್ಯ ವಿಮೆಗೆ (ಇSI) ಒಳಪಡಿಸುತ್ತದೆ.

(viii) ಶಿಕ್ಷಕರು ಕಾಯ್ದೆ ಸೆಕ್ಷನ್ 24[1] ಮತ್ತು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಯಮ 17ರ ಅಡಿಯಲ್ಲಿ ಸೂಚಿಸಲಾದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ ಮತ್ತು ಮೇಲ್ವಿಚಾರಣೆ ಪರಿಗಣನೆಗಳಿಗಾಗಿ ಖಾಸಗಿ ಟ್ಯೂಷನ್ಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ.

ಉಪನಿರ್ದೇಶಕರು (ಆಡಳಿತ
ಶಾಲಾ ಶಿಕ್ಷಣ ಇಲಾಖೆ
ಕೊಪ್ಪಳ

11. ಶಾಲೆಯು ಸಂಯೋಜಿತವಾಗಿರುವ ಶೈಕ್ಷಣಿಕ ರಾಜ್ಯ ಪಠ್ಯಕ್ರಮ ಮತ್ತು ರಾಜ್ಯ ಪಠ್ಯ ಪುಸ್ತಕಗಳನ್ನು ಅನುಸರಿಸುವುದು.

12. ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್ 19ರಲ್ಲಿ ನಿರ್ದಿಷ್ಟಪಡಿಸಿದಂತೆ ಶಾಲೆಯು ನಿಯಮಗಳು ಮತ್ತು ಮಾನದಂಡಗಳನ್ನು ನಿರ್ವಹಿಸುವುದು. ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಲ್ಲಿ ಸೂಚಿಸಿರುವಂತೆ ಇಲಾಖಾ ಸಿಬ್ಬಂದಿಗಳನ್ನು ನೇಮಿಸುವುದು.

13. ಶಾಲೆಗೆ ಸಂಬಂಧಿಸಿದ ಶಾಲಾ ಕಟ್ಟಡಗಳು ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಹಗಲು ಅಥವಾ ರಾತ್ರಿಯಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ಅಥವಾ ರಾಜಕೀಯ ಮತ್ತು ಶೈಕ್ಷಣಿಕೇತರ ಚಟುವಟಿಕೆಗಳಿಗೆ ನೀಡಬಾರದು.

14. ಶಾಲೆಯನ್ನು ಯಾವುದೇ ವ್ಯಕ್ತಿ ಅಥವಾ ಗುಂಪು ಅಥವಾ ಸಂಘದ ಲಾಭಕ್ಕಾಗಿ ನಡೆಸಬಾರದು.

15. ಶಾಲೆಯನ್ನು ಚಾರ್ಟೆಡ್ ಅಕೌಂಟೆಂಟ್ನಿಂದ ಆಡಿಟ್ ಮಾಡಿಸಿ, ಪ್ರತಿಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.

16. ಸರ್ಕಾರಿ ಅಧಿಸೂಚನೆಯ [ಕನ್ನಡ ಭಾಷಾ ನೀತಿ 2016] ಪ್ರಕಾರ ಶಾಲೆಯು ಭಾಷಾ ನೀತಿಯನ್ನು ಅನುಸರಿಸುವುದು.

17. ಆರ್.ಟಿ.ಇ ಕಾಯ್ದೆ ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಆಡಳಿತ ಮಂಡಳಿ ಮತ್ತು ಶಿಕ್ಷಕರುಗಳು ಕಾರ್ಯನಿರ್ವಹಿಸುವುದು.

18. ಶಾಲೆ / ಆಡಳಿತ ಮಂಡಳಿಯು ಸರ್ಕಾರ ಮತ್ತು ಇಲಾಖೆಯ ನಿಯಮ ಮತ್ತು ನಿರ್ದೇಶನವನ್ನ ತಪ್ಪದೇ ಪಾಲಿಸುವುದು.

19. ಪ್ರತಿ ವರ್ಷದ ಮಾರ್ಚ್ ಅಂತ್ಯದ ಒಳಗಾಗಿ ಎಸ್.ಎ.ಟಿ.ಎಸ್ನಲ್ಲಿ ಶಾಲಾ ಮಾಹಿತಿಯನ್ನು ನಿಯಮನುಸಾರ ಅಪ್ಡೇಟ್ ಮಾಡುವುದನ್ನು ಕಡ್ಡಾಯಗೊಳಿಸಿದೆ.

20. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

21. ಶಾಲಾ ಮಾನ್ಯತೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಆಡಳಿತ ಮಂಡಳಿಯು ಆನ್ ಲೈನ್ ನಲ್ಲಿ ಸಲ್ಲಿಸಿದ ಅರ್ಜಿಯಲ್ಲಿನ ಸಂಪೂರ್ಣ ದಾಖಲೆ/ ಮಾಹಿತಿಗಳನ್ನು ಇಲಾಖಾ ವೆಬ್ ಸೈಟ್ ನಲ್ಲಿ ಸಾರ್ವಜನಿಕವಾಗಿ ವೀಕ್ಷಿಸಲು ಅನುವುಮಾಡಿಕೊಡಲಾಗುವುದು.

22. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

23. ಸಕ್ಷಮ ಪ್ರಾಧಿಕಾರದಿಂದ ಪಡೆದ ಸುರಕ್ಷತಾ ಪ್ರಮಾಣ ಪತ್ರಗಳು ಮತ್ತು ಲೀಸ್ ಕರಾರು ಪತ್ರ ದಾಖಲೆಗಳನ್ನು ಅವುಗಳ ಅವಧಿ ಮುಗಿದ 1 ತಿಂಗಳ ಒಳಗಾಗಿ ನವೀಕರಿಸಿ SATS ನಲ್ಲಿ ಕಡ್ಡಾಯವಾಗಿ ಅಪ್ ಲೋಡ್ ಮಾಡುವುದು.

ಉಪನಿರ್ದೇಶಕರು(ಆಡಳಿತ)

ಸಾರ್ವಜನಿಕ ಶಿಕ್ಷಣ ಇಲಾಖೆ

KOPPAL (2907) ಜಿಲ್ಲೆ

ಗೆ,

1. ಸಂಬಂಧಿಸಿದ ಆಡಳಿತ ಮಂಡಳಿ NINGOJI EDUCATION AND RURAL DEVELOPMENT TRUST KOPPAL

2. ಮುಖ್ಯ ಶಿಕ್ಷಕರು, /WARD 9 YELBURGA/S A NINGOJI CENTRAL PUBLIC SCHOOL AND HIGH SCHOOLಶಾಲೆ ಮತ್ತು ವಿಳಾಸ

3. ಕ್ಷೇತ್ರ ಶಿಕ್ಷಣಾಧಿಕಾರಿಗಳು,YELBURGA (290709) ತಾಲ್ಲೂಕು/ವಲಯ KOPPAL (2907) ಜಿಲ್ಲೆ.

4. ಕಛೇರಿ ಪ್ರತಿ.

Digitally signed by SHRISHAIL S BIRADAR
Date: 2025.01.23 18:32:37 +05:30